ಆದರೆ, ಯಾವುದಾದರೂ ಒಂದು ಹಂತದಲ್ಲಿ ಈ ಕತೆಯನ್ನು ಮುಂದುವರಿಸಬೇಕು. ಅಂದರೆ, ಮಹಾ ಪ್ರವಾಹದಂಥ ಸಮುದ್ರವೂ ಅದರ ಹೆದ್ದೆರೆಗಳೂ ಆ ಭಯಂಕರ ಶತ್ರುಗಳ ಬೋಟುಗಳನ್ನು, ಒಂದು ಇನ್ನೊಂದಕ್ಕೆ ತಾಗುವಂತೆ, ದೂಡಬೇಕು. ಆ ಶತ್ರುಗಳು ಆ ಅಲ್ಲೋಲಕಲ್ಲೋಲದಲ್ಲಿ ಮುಖಾಮುಖಿಯಾಗಬೇಕು. ಹಾಗೆಯೇ ಆಯಿತೆಂದುಕೊಳ್ಳೋಣ. ಇಬ್ಬರಲ್ಲಿ ಒಬ್ಬರು ಕೂಡ ಉದ್ದೇಶಿಸಿರದಂತೆ ಅವರ ದೋಣಿಗಳು ಒಟ್ಟಿಗೆ ಬಂದು, ಒಂದೇ ಅಲೆಯ ತುದಿಗೇರಿ, ಪರಸ್ಪರ ಡಿಕ್ಕಿ ಹೊಡೆದು, ಆ ಡಿಕ್ಕಿಯ ಪ್ರಭಾವವನ್ನು ತಡೆದುಕೊಳ್ಳಲಾರದೆ ನೀರಲ್ಲಿ ಮಗುಚಿಕೊಂಡವು.

ಇಬ್ಬರಲ್ಲಿ ಒಬ್ಬರಿಗೂ ಈಜು ಬರುತ್ತಿರಲಿಲ್ಲ ಎಂದು ಇಟ್ಟುಕೊಳ್ಳಿ. ಅಂಥ ಸಂದರ್ಭಗಳಲ್ಲಿ ಈಜು ಬಾರದವರು ಏನು ಮಾಡುತ್ತಾರೋ ಅದನ್ನೇ ಅವರೂ ಮಾಡಿದರು. ಅಂದರೆ, ಒಬ್ಬರು ಇನ್ನೊಬ್ಬರನ್ನು ಏನೇ ಆಗಲಿ, ಬಿಡುವುದಿಲ್ಲ ಎನ್ನುವಂತೆ ಬಿಗಿಯಾಗಿ ತಬ್ಬಿಹಿಡಿದುಕೊಂಡರು. ಇಬ್ಬರೂ ಒಟ್ಟಿಗೆ ಮುಳುಗಿದರು, ಒಟ್ಟಿಗೆ ಉಸಿರು ಬಿಗಿಹಿಡಿದುಕೊಂಡರು, ಒಟ್ಟಿಗೆ ನೀರು ಕುಡಿದರು, ಒಟ್ಟಿಗೆ ಮೇಲೆ ತೇಲಿದರು. ದೈತ್ಯಾಕಾರದ ಅಲೆಯೊಂದು ಪರಸ್ಪರ ಅಪ್ಪಿಕೊಂಡೇ ಇದ್ದ ಆ ಇಬ್ಬರನ್ನು ಹತ್ತಾರು ಮೀಟರುಗಳಷ್ಟು ದೂರ ಹೊತ್ತುಹಾಕತೊಡಗಿತು. ಅಲೆಯ ಮೇಲೆ ಅಲೆ ಅವರನ್ನು ತೀರದ ಹತ್ತಿರಕ್ಕೆ ಕೊಂಡೊಯ್ಯುತ್ತಿರುವಾಗ ಅವರು ಹೇಗೆ ಕೆಮ್ಮಿದರು, ಹೂಂಕರಿಸಿದರು, ತಿರುಗಣೆಯಂತೆ ಸುತ್ತಿದರು ಎಂಬ ಕತೆಯನ್ನು ಹೇಳುವವರು ಯಾರು? ಇಬ್ಬರೂ ಇದ್ದಕ್ಕಿದ್ದಂತೆ ತಳವನ್ನು ಮುಟ್ಟಿಯೂ ಮೇಲೆ ತೇಲಿ, ತಮ್ಮನ್ನು ನುಂಗಿಹಾಕಲಿದ್ದ ಸಮುದ್ರದಿಂದ ಬಿಡಿಸಿಕೊಂಡು ಒಬ್ಬರನ್ನೊಬ್ಬರು ಅಪ್ಪಿಕೊಂಡೇ, ಕೊನೆಗೂ ತಪ್ಪಿಸಿಕೊಂಡೆವಲ್ಲಾ ಎಂದು ನಿರಾಳವಾಗಿ ಉಸಿರಾಡುತ್ತ ತೀರವನ್ನು ಮುಟ್ಟಿದರು ಎಂದು ನಾವು ಈ ಕತೆಯಲ್ಲಾದರೂ ಹೇಳುವುದೊಳ್ಳೆಯದು. ದಣಿದುಹೋಗಿದ್ದ ಇಬ್ಬರೂ ಒಬ್ಬರಿಗೊಬ್ಬರು ಅಂಟಿಕೊಂಡೇ ಕೂತರು. ಇನ್ನೂರು ವರ್ಷಗಳ ಮೌನ ಮುರಿದು ಮೂಡಣ ಅಪ್ಪಣ್ಣ ಮೊಟ್ಟಮೊದಲು "ಕೈಗೆ ಬಂದ ಮೀನು ಬಾಯಿಗೆ ಸಿಕ್ಕಲಿಲ್ಲ" ಎಂದ. ಅದಕ್ಕೆ ಪಡುವಣ ಅಪ್ಪಣ್ಣ, "ಹ್ಞೂಂ, ಕೈಗೆ ಬಂದ ಮೀನು ಬಾಯಿಗೆ ಸಿಕ್ಕಲಿಲ್ಲ" ಎಂದು ಸೇರಿಸಿದ. ಇಬ್ಬರ ಮನಸ್ಸಿನಲ್ಲೂ ಅವರಿಗೆ ಪ್ರಿಯವಾಗಿದ್ದ

